


ಸರ್ವಧಾರಿ ಸಂವತ್ಸರ | ಶ್ರಾವಣ | ಅಗಸ್ಟ್ ೨೦೦೮ | ಸಂಪುಟ–೨ | ಸಂಚಿಕೆ–೮

**ಗುರುವಾಣಿ**

# ಗೋ ಸಂರಕ್ಷಣಾ ಆಂದೋಲನದ ನಿಜವಾದ ಸ್ವಾತಂತ್ರ್ಯ ಸಂಗ್ರಾಮವಾಗಬೇಕಾದರೆ...



**ಹೂರಣ**


ಗುರುವಾಣಿ
ಪ್ರಶ್ನೋತ್ತರ
ಕ'ಸಾಯಿ'ಗಳ ಕಪಿಮುಷ್ಟಿಯಲ್ಲಿ ಗೋಮಾತೆ
ಮಾಸದ ಗೋವು: ಸಿಂಧಿ
ಗೋವು ಮತ್ತು ಕೃಷಿ
ನೀವು ಮನುಜರೇ?



ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org
ಸಂಪರ್ಕ: govishva@gmail.com




ತುಂಬ ಶ್ರಮ ಮಾತ್ರವಲ್ಲ, ವ್ಯವಸ್ಥಿತ ಕ್ರಮವೂ ಬೇಕು. ಕ್ರಮದ ಅನಿವಾರ್ಯತೆ, ಗಂಭೀರತೆ ಇತಿಹಾಸವನ್ನು ತಡಕಾಡಿದರೆ ಎಡತಾಕುತ್ತದೆ.

ಅದೃಷ್ಟವೆಂದೇ ಹೇಳಬೇಕು. ೧೮೫೭ರಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾಯಿತು. ಸ್ವಾತಂತ್ರ್ಯ ಸಿಗಲಿಲ್ಲ. ಏಕೆ ಹೀಗೆ ಎನ್ನುತ್ತಿದ್ದೇವೆ ಎಂದು ಆಶ್ಚರ್ಯವಾಗುತ್ತಿದೆಯೇ!? ಅಂದಿನ ಸಂಗ್ರಾಮದಲ್ಲಿ ಸಿಪಾಯಿಗಳದ್ದೇ ಮುಂದಾಳತ್ವವಿತ್ತು. ಅಂದಿನ ಸಂದರ್ಭದಲ್ಲಿ 'ಭಾರತದ ದಾಸ್ಯ ವಿಮೋಚನೆ' ಇಷ್ಟೇ ಆಗಿತ್ತು ಅವರೆಲ್ಲರ ಕನಸು.

ಸಂಗ್ರಾಮವನ್ನು ಪ್ರಾರಂಭಿಸಲು ಕಾಡತೂಸುಗಳಲ್ಲಿ ಗೋವು ಮತ್ತು ಹಂದಿಯ ಕೊಬ್ಬನ್ನು ಬಳಸಿದ್ದು ಮತ್ತು ಸಿಪಾಯಿಗಳಿಗೆ ತಿಳಿಸದೇ ಕಾಡತೂಸುಗಳನ್ನು ಬಳಸಬೇಕು ಎಂದು ಬ್ರಿಟಿಷರು ಕಟ್ಟಪ್ಪಣೆ ವಿಧಿಸಿದ್ದು ನೆಪವಾಗಿ ಸಿಕ್ಕಿತ್ತು. ಭಾರತೀಯ ಸಿಪಾಯಿಗಳಲ್ಲಿ ಬಹುತೇಕರು ಅದನ್ನು ವಿರೋಧಿಸಿದರು. ಅಂದಿನವರೆಗೆ ಬ್ರಿಟಿಷರ ಗುಲಾಮಗಿರಿಯ ನರಳಿಕೆಯಲ್ಲಿ ಒಳಗೇ ಹೊತ್ತಿಕೊಂಡು ಧಗಧಗ ಉರಿಯುತ್ತಿದ್ದ ಪ್ರದ್ವೇಶದ ಜ್ವಾಲೆ ಭಗ್ಗನೆ ಹೊರಗೆ ಬಂತು. ಊರನ್ನೆಲ್ಲ ತನ್ನೊಳಗೆ ಸೆಳೆದುಕೊಂಡಿತು. ಹೀಗೆ ಸಿಪಾಯಿಗಳ ಹಿರಿತನದಲ್ಲಿ ದೇಶದ ಜನಸ್ತೋಮ ಬ್ರಿಟಿಷ್ ಆಡಳಿತದ ವಿರುದ್ಧ ಸಂಗ್ರಾಮವನ್ನು ಘೋಷಿಸಿಬಿಟ್ಟಿತು.

ಈಗೆಲ್ಲ ಕಂಡುಬರುವ ವಿವರಣೆಯಂತೆ ಸಂಗ್ರಾಮದ ಸ್ಫೂರ್ತಿ ಪ್ರಬಲವಾಗಿಯೇ ಇತ್ತು. ಒಂದು ವೇಳೆ ಸಂಗ್ರಾಮಕ್ಕೆ ಬ್ರಿಟಿಷರು ಹೆದರಿ ಭಾರತವನ್ನು ತೊರೆದರೆ ಭಾರತದ ಆಡಳಿತ ವ್ಯವಸ್ಥೆಯನ್ನು ಹೇಗೆ ಕಟ್ಟಿ ಬೆಳೆಸುವುದು ಎಂಬ ಬಗ್ಗೆ ನಿರ್ದಿಷ್ಟ ಮಾನದಂಡ, ಸ್ಪಷ್ಟ ರೂಪುರೇಷೆಗಳಿರಲಿಲ್ಲ. ಅದಕ್ಕೆ ಸರಿಯಾಗಿ ಸಂಗ್ರಾಮದಲ್ಲಿ ಭಾರತೀಯರಿಗೆ ಸೋಲಾಯಿತು. ಒಂದರ್ಥದಲ್ಲಿ ಸೋತು ಗೆದ್ದಂತಾಯಿತು. ನಮ್ಮ ದೌರ್ಬಲ್ಯ ಕಂಬಳಿ ಹೊದ್ದು ಮಲಗಿಕೊಂಡಿತು.

ನಂತರದ ಸುಮಾರು ೬೦ ವರ್ಷಗಳ ಅವಧಿಯಲ್ಲಿ ಅಲ್ಲಲ್ಲಿ, ಆಗಾಗ ಸಣ್ಣಪುಟ್ಟ ಹೋರಾಟಗಳು, ದಂಗೆಗಳು ನಡೆಯುತ್ತಿದ್ದವು. ಮಧ್ಯದಲ್ಲಿ ದೇಶವನ್ನು ಮುನ್ನಡೆಸುವ ಮಹಾನಾಯಕರ ಉದಯ ಆಯಿತು ಅನ್ನುವಷ್ಟರಲ್ಲಿ ಅವರು ಮೂಲೆ ಸೇರುತ್ತಿದ್ದರು. ೧೯೨೦ರ ಸುಮಾರಿನಲ್ಲಿ ಮಹಾತ್ಮಾ ಗಾಂಧಿ ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮುಕಿದರು. ಮುಂದೆ ಅವರು ಚಳುವಳಿಯ ನಾಯಕ ಪೀಠವನ್ನು ಅವಿರೋಧವಾಗಿ ಅಲಂಕರಿಸಿದರು. ಆಗ ಭಾರತದ ಸ್ವಾತಂತ್ರ್ಯ ಚಳುವಳಿ ಒಂದು ಅರ್ಥ ಕಂಡುಕೊಳ್ಳುವತ್ತ ಸಾಗತೊಡಗಿತು. ಗಾಂಧೀಜಿ ಒಂದು ಹೆಜ್ಜೆ ಮುಂದೆ ಹೋಗಿ 'ಗ್ರಾಮ ಸ್ವರಾಜ್ಯ, ಗ್ರಾಮೀಣ ಭಾರತ' ಎಂಬ ಸನಾತನ ವಿಚಾರಗಳನ್ನು ನವೀನ ಮಾದರಿಯಲ್ಲಿ ಪ್ರಸ್ತಾಪಿಸತೊಡಗಿದರು. ಅದು ಭಾರತವನ್ನು ಸುಸ್ಥಿರವಾಗಿ ಕಟ್ಟಲು ಹೆದ್ದಾರಿಯಾಗಿ ಗೋಚರಿಸುತ್ತಿತ್ತು. ಇಂದು ಕೂಡ ಅದು ಅಪ್ರಸ್ತುತವಾಗಿಲ್ಲ.

ಒಂದು ವೇಳೆ ಭಾರತಕ್ಕೆ ಬ್ರಿಟಿಷರ ದಾಸ್ಯದಿಂದ ವಿಮೋಚನೆ ಸಿಕ್ಕಿದರೆ ಗಾಂಧೀಜಿಯ ಕನಸು ನನಸಾಗುತ್ತದೆ. ಇಡೀ ಭಾರತ ಸುಖದ ಸುಪ್ಪತ್ತಿಗೆಯನ್ನು ಏರುತ್ತದೆ ಎಂದೇ ಎಲ್ಲರೂ ಭಾವಿಸಿದ್ದರು. ಒಂದರ್ಥದಲ್ಲಿ ಅದೇ ಅಮಲಿನಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಮುನ್ನಡೆಸಲು ಸ್ಫೂರ್ತಿಯನ್ನೂ ಪಡೆದುಕೊಂಡಿದ್ದರು. ಬ್ರಿಟಿಷರ ನಿರ್ಗಮನದಿಂದ ೧೯೪೭ ಆಗಸ್ಟ್ ೧೪ರ ಮಧ್ಯರಾತ್ರಿ ಭಾರತ ಸ್ವತಂತ್ರವಾಯಿತು. ಆ ಸ್ವಾತಂತ್ರ್ಯದಿಂದ ಎಲ್ಲ ಭಾರತೀಯರ ಕಂಗಳೂ ನೀರಿನಿಂದ ತಂಪಾಯಿತು. ಹಾಗೆಯೇ ಮತ್ತೊಂದೆಡೆ ಸ್ವತಂತ್ರಗೊಳ್ಳುವ ಸಂಭ್ರಮ ಅಲ್ಲಿಗೇ ಮುಗಿಯಿತು. ನಂತರದ ದಿವಸಗಳಲ್ಲಿ ನಮ್ಮಲ್ಲಿದ್ದ ಶಕ್ತಿಯನ್ನು ಬಡಿದೆಬ್ಬಿಸಲು ಮತ್ತೆ ಪರಕೀಯರೇ ಬರಬೇಕೆಂಬ ಮಾತನ್ನು ನಿಜಗೊಳಿಸಲೆಂಬಂತೆ ಹಲವರು ಮಲಗಿದರು. ಎಲ್ಲರಲ್ಲಿಯೂ ಓಡುವ ಶಕ್ತಿಯಿದೆ, ಸಾಮರ್ಥ್ಯವಿದೆ. ಆದರೆ, ಅದನ್ನು ಸಾಬೀತುಪಡಿಸಲು ಹುಲಿಯೇ ಅಟ್ಟಿಸಿಕೊಂಡು ಬರಬೇಕು ಎಂಬಂತಾಯಿತು.

ಮುಂದಿನದು ದೇಶ ಕಟ್ಟುವ ಸರದಿ. ಕಟ್ಟಲು ಗಾಂಧೀ ಮಹಾತ್ಮನ ಕನಸಿತ್ತು. ನನಸಾಗಿಸಲು ಅವರಿಗೆ ವಯಸ್ಸಾಗಿತ್ತು. ಸಮರ್ಥ ವಾರಸುದಾರರ ಕೊರತೆಯೂ ಇತ್ತು. 'ಯೋಜಕಸ್ತತ್ರದುರ್ಲಭಃ' ಎಂದು ಹೇಳುವುದಿದೆ. ಎಲ್ಲ ಪರಿಕರಗಳೂ ಇರುತ್ತವೆ. ಆದರೆ ಅವುಗಳನ್ನು ಒಂದು ವ್ಯವಸ್ಥೆಯಲ್ಲಿ ಹೆಣೆಯಲು ಸಮರ್ಥ ನಾಯಕರೇ ಇಲ್ಲವಾಗಿರುತ್ತಾರೆ. ಇದು ಎಲ್ಲ ಕಾಲದ ಸಮಸ್ಯೆ. ಆ ಕಾಲದಲ್ಲಿ ಮತ್ತೆ ಕಾಣಿಸಿಕೊಂಡಿತು. ಹಾಗಾಗಿ ಆಡಳಿತ ಚುಕ್ಕಾಣಿ ಕಂಡಕಂಡವರ ಕೈ ಸೇರಿತು. ದೇಶ ಸೊರಗಿತು. ಆ ಕಾರಣದಿಂದ ಭಾರತ ದೇಶ ನಿಜವಾಗಿಯೂ ಸ್ವತಂತ್ರವಾಗಿಲ್ಲ. ಇನ್ನೊಂದು ಅಂಶವನ್ನು ಸ್ಪಷ್ಟಪಡಿಸಬೇಕು. ನಾವು ಪ್ರಸ್ತಾಪಿಸುತ್ತಿರುವ ಸ್ವಾತಂತ್ರ್ಯದಲ್ಲಿ ಸ್ವೇಚ್ಛಾಚಾರಕ್ಕೆ ಎಳ್ಳಷ್ಟೂ ಆಸ್ಪದವಿಲ್ಲ.

ಗೋ ಸಂರಕ್ಷಣೆಯ ಆಂದೋಲನ ಈಗಾಗಲೇ ನಡೆದ ಸ್ವಾತಂತ್ರ್ಯ ಸಂಗ್ರಾಮ, ಚಳುವಳಿಗಳ ಸಾಲಿನಲ್ಲಿ ಮತ್ತೊಂದಾಗಿ ಕೊಚ್ಚಿಹೋಗಬಾರದು. ಅದಕ್ಕಾಗಿ ಸುಭದ್ರ, ಪರ್ಯಾಯ ವ್ಯವಸ್ಥೆಗೆ ಸರ್ವಸ್ವವನ್ನೂ ಒಪ್ಪಿಸಿಕೊಂಡು, ಸಮರ್ಥ ನಾಯಕತ್ವದೊಂದಿಗೆ, ಸದೃಢ ಹೆಜ್ಜೆಗಳನ್ನಿಡುವತ್ತ ಗಮನವನ್ನು ಕೇಂದ್ರೀಕರಿಸಿಕೊಂಡು, ನಮ್ಮ ಜೀವ–ಜೀವಿತಕ್ಕೆ ಒಗ್ಗದ ಜೀವನ ಕ್ರಮದ ವಿರುದ್ಧ ಸಮರ ಸಾರಿದ್ದೇವೆ. ಕೇವಲ ಅದು ಹಳೆಯದು ಎಂಬ ಕಾರಣಕ್ಕೆ ಅದನ್ನು ನೆಚ್ಚಿಕೊಂಡದ್ದಲ್ಲ. ಅದು ಹಾಳಾಗದ್ದು ಕೂಡ ಆಗಿದೆ ಎಂಬ ಕಾರಣಕ್ಕೆ ಸ್ವೀಕರಿಸಿದ್ದೇವೆ.

ಗೋ ಆಧಾರಿತ ಭಾರತವನ್ನು ಕಟ್ಟುವ ಸಂಕಲ್ಪ ತೊಟ್ಟಿದ್ದೇವೆ. ಹಾಗಾದಲ್ಲಿ ಗ್ರಾಮ ಬಿಡಿ, ಒಬ್ಬೊಬ್ಬ ರೈತನೂ ಸ್ವಾವಲಂಬಿಯಾಗುತ್ತಾನೆ. ಅನ್ನ, ನೀರನ್ನು ಗಳಿಸಲು, ನೆಮ್ಮದಿ ಕಾಣಲು ಕಾಣದ ಕೈಗೊಳಿಂದಿಗೆ ವ್ಯರ್ಥ ಗುದ್ದಾಟವನ್ನು ನಡೆಸುವುದು ತಪ್ಪುತ್ತದೆ. ಭೂಮಿ ಹಸನಾಗುತ್ತದೆ. ರೈತನ ಬಾಳು ಬಂಗಾರವಾಗುತ್ತದೆ. ಅವನ ಬಾಳು ಬಂಗಾರವಾದರೆ ಉಳಿದವರ ಬಾಳಿನ ಬಗೆಗೆ ಸಂಶಯ ಬೇಡ ಅನಿಸುತ್ತದೆ.

ಮತ್ತೆ ಹೇಳುತ್ತೇವೆ. ಇದು ನಿಜವಾಗಿಯೂ ಸ್ವಾತಂತ್ರ್ಯ ಸಂಗ್ರಾಮವಾಗಬೇಕಾದರೆ ಜೀವಿತದಲ್ಲಿ ಇಬ್ಬಂದಿತನವನ್ನು ಬಿಡಬೇಕು. ಹಿತವಾಗಿದ್ದರ ಕಡೆಗೆ ಒಲವಿರಬೇಕು. ನೆನಪಿರಲಿ. ನಮ್ಮ ಜೀವಿತದೊಂದಿಗೇ ಎಲ್ಲವೂ ಮುಗಿಯುವುದಿಲ್ಲ. ಅನಂತರವೂ ಭೂಮಿಗೆ ಬಂದು ಹೋಗುವವರಿದ್ದಾರೆ.

**– ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

**ಶ್ರೀ ರಾಮಚಂದ್ರಾಪುರ ಮಠ**

# ಪ್ರಶ್ನೋತ್ತರ

ಪ್ರ: ಗೋ ವಧೆ ಮಾಡುವುದು ಮುಸಲ್ಮಾನರಿಗೆ ಧಾರ್ಮಿಕ ಅಗತ್ಯವೇ?

ಉ: ಸುಪ್ರೀಮ್ ಕೋರ್ಟಿನಲ್ಲಿ ಈ ಪ್ರಶ್ನೆ ಬಂದಾಗ ಅದಕ್ಕೆ ಪೂರಕವಾದ ಯಾವುದೇ ಶಾಸ್ತ್ರವಾಕ್ಯಗಳನ್ನು ಸಾಕ್ಷಿಯಾಗಿ ನೀಡುವುದರಲ್ಲಿ ಮುಸಲ್ಮಾನ್ ಧರ್ಮಗುರುಗಳು ವಿಫಲರಾದರು. ಆದ್ದರಿಂದ ಹಸುಗಳನ್ನು ಕೊಲ್ಲುವುದು ಹಾಗೂ ಗೋಮಾಂಸ ತಿನ್ನುವುದು ಮುಸಲ್ಮಾನರಿಗೆ ಧಾರ್ಮಿಕ ಅಗತ್ಯ ಎಂಬ ವಾದವನ್ನು ಕೋರ್ಟು ತಳ್ಳಿಹಾಕಿತು. ಅದಕ್ಕೆ ಪ್ರತಿಯಾಗಿ ಅನೇಕ ಪ್ರಮುಖ ಮುಸಲ್ಮಾನ್ ದೊರೆಗಳಾದ ಬಾಬರ್, ಹುಮಾಯೂನ್, ಅಕ್ಬರ್, ಜಹಾಂಗೀರ್, ಅಹಮದ್ ಷಾ, ಹೈದರಾಲಿ ಮುಂತಾದವರು ಗೋಹತ್ಯೆ ಮಾಡುವವರಿಗೆ ಉಗ್ರ ಶಿಕ್ಷೆ ವಿಧಿಸುತ್ತಿದ್ದರು ಎಂದು ಇತಿಹಾಸ ತಿಳಿಸುತ್ತದೆ.

ಪ್ರ: ಹದಿನೈದು ವರ್ಷ ವಯಸ್ಸು ದಾಟಿದ ಎತ್ತುಗಳು ನಿರುಪಯೋಗಿಯಾಗುವವೇ?

ಉ: ಹದಿನೈದು ವರ್ಷ ವಯಸ್ಸು ದಾಟಿದ ಎತ್ತುಗಳು ಮುದಿಯಾಗಿ ನಿರುಪಯೋಗಿಯಾಗುತ್ತವೆ. ಆದ್ದರಿಂದ ಅವನು ಕೊಲ್ಲುವುದೇ ಉತ್ತಮ ಎಂಬುದು ಕಸಾಯಿಗಳ ವಾದವಾಗಿತ್ತು. ಇದಕ್ಕೆ ಪ್ರತಿಯಾಗಿ ಗೋವಂಶದ ಪ್ರಾಣಿಗಳು ಸಾಯುವವರೆಗೆ ತಮ್ಮ ಸಗಣಿ ಮತ್ತು ಗಂಜಲದ ಮೂಲಕ ಕೃಷಿಗೆ ಅಮೂಲ್ಯವಾದ ಸಾವಯವ ಗೊಬ್ಬರ ಹಾಗೂ ಕೀಟಾಶಕಗಳನ್ನು ಒದಗಿಸುತ್ತವೆ. ಅದಕ್ಕೆ ಹಣ ನೀಡಬೇಕಾಗಿಲ್ಲ. ಸಗಣಿಯು ಮೌಲ್ಯದಲ್ಲಿ ಕೊಹಿನೂರ್ ವಜ್ರಕ್ಕಿಂತಲೂ ಬೆಲೆ ಬಾಳುವಂತಹುದು. ಹದಿನೈದು ವರ್ಷ ವಯಸ್ಸು ದಾಟಿದ ಒಂದು ಎತ್ತನ್ನು ಕೊಂದರೆ ಒಬ್ಬ ಕಟುಕನಿಗೆ ಒಂದು ದಿನದ ಉದ್ಯೋಗ ದೊರೆಯಬಹುದು. ಆದರೆ ಅದನ್ನು ಸಾಕಿದರೆ ಸಗಣಿ ಒಂದರಿಂದಲೇ ಅದು ಒಬ್ಬ ವ್ಯಕ್ತಿಯನ್ನು ೫ ವರ್ಷದವರೆಗೆ ಸಾಕಬಲ್ಲುದು. ಆದ್ದರಿಂದ ೧೫ ವರ್ಷದ ನಂತರ ಎತ್ತುಗಳನ್ನು ಕೊಲ್ಲುವುದು ಯೋಗ್ಯ ಎಂಬ ವಾದವನ್ನು ಕೋರ್ಟು ತಿರಸ್ಕರಿಸಿತು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

# ಕ'ಸಾಯಿ'ಗಳ ಕಪಿಮುಷ್ಟಿಯಲ್ಲಿ ಗೋಮಾತೆ

ನಾವು ಬಸ್‌ನಲ್ಲಿ ಪ್ರಯಾಣಿಸುವಾಗ ಸ್ವಲ್ಪ ರಶ್ ಇದ್ದರೆ, "ಅಬ್ಬಾ, ಇದೆಂಥಾ ರಶ್! ಕಾಲು ಹಾಕ್ಲಿಕ್ಕೂ ಜಾಗ ಇಲ್ಲ"– ಅಂತ ಗೊಣಗಿಕೊಂಡು, ಆದಷ್ಟು ಖಾಲಿ ಇರುವ ಬಸ್‌ನಲ್ಲಿ, ಆರಾಮವಾಗಿ ಹೋಗಲು ಪ್ರಯತ್ನಿಸುತ್ತೇವೆ. ಆದರೆ ನಮ್ಮ ಪ್ರೀತಿಯ ಗೋಮಾತೆಯ ಪರಿಸ್ಥಿತಿ ನೋಡಿ– ಯಾವುದೋ ಒಂದು ಹಳೇ ಕಿತ್ತುಹೋದ ಟೆಂಪೋದಲ್ಲಿ ಮೂವತ್ತೈದರಿಂದ ನಲುವತ್ತು ದನಗಳನ್ನು ಒತ್ತೊತ್ತಾಗಿ ಹತ್ತಿಸಿ, ಅಲ್ಲೇ ಅರೆಜೀವವಾಗುವಂತೆ ಕೊಂಡೊಯ್ಯುತ್ತಾರೆ. ಹೀಗೆ ಕೊಂಡೊಯ್ಯುವುದು ಕಸಾಯಿಖಾನೆಗೆ. ಜೀವಮಾನ ಪರ್ಯಂತ ತನ್ನನ್ನು ಮಾನವನ ಒಳಿತಿಗಾಗಿ ಧಾರೆ ಎರೆದ ಆ ಮಾತೆಯ ಜೀವ ಕಸಿದುಕೊಳ್ಳ(ಲ್ಲ)ಲು.

ಕೆಲವು ಸಮಯದ ಹಿಂದೆ ಪತ್ರಿಕೆಯಲ್ಲಿ ಓದಿದ ನೆನಪು. ಒಂದು ಟೆಂಪೋದಲ್ಲಿ ಸುಮಾರು ನಲುವತ್ತು ದನಗಳನ್ನು ಹೀಗೆ ಕೊಂಡೊಯ್ಯುತ್ತಿದ್ದಾಗ ಸಿಕ್ಕಿಬಿದ್ದರೆಂದು. ಆ ದನಗಳನ್ನು ಟೆಂಪೋದೊಳಗೆ ತುಂಬಿಸಿದ ವಿಧಾನವನ್ನು ನೋಡಿದರೆ ಮನಸ್ಸು ಕಲಕುತ್ತದೆ. ಹಿಡಿದಷ್ಟವನ್ನು ಒತ್ತೊತ್ತಾಗಿ ತುಂಬಿಸಿ, ಮತ್ತುಳಿದವುಗಳ ಕಾಲುಗಳನ್ನು ಟೆಂಪೋದ ಮೇಲ್ಭಾಗಕ್ಕೆ ಕಟ್ಟಿ ನೇತುಹಾಕಿದ್ದರು. ಎಂಥ ಕಟುಕರಿರಬೇಕು ಆ ಜನ! ನಮ್ಮನ್ನು ಆ ರೀತಿ ತಲೆಕೆಳಗೆ ಮಾಡಿ ಕಟ್ಟಿಹಾಕಿ ಸಾಗಿಸುವುದನ್ನು ಕಲ್ಪನೆ ಮಾಡಿಕೊಳ್ಳಿ... ಅಬ್ಬ! ಕಲ್ಪಿಸಿಕೊಳ್ಳುವುದಕ್ಕೂ ಭಯವಾಗುತ್ತದೆ. ಏನು ಮಾಡಿದ್ದಳು ಆ ಮೂಕಮಾತೆ ಇವರಿಗೆ? ತನ್ನ ಸರ್ವಸ್ವವನ್ನೂ ಇವರಿಗೆ ಧಾರೆಯೆರೆದದ್ದು ತಪ್ಪಾಯಿತೆ? ಅವಳ ಆರ್ತನಾದ ಇವರಿಗೆ ಕೇಳದೆ?

ಇಂಥ ಪ್ರಕರಣಗಳು ಬೆಳಕಿಗೆ ಬಂದಾಗ ಒಂದಷ್ಟು ದಿನ ಪ್ರತಿಭಟನೆಗಳು ನಡೆಯುತ್ತವೆ. ಆಮೇಲೆ ಆ ಬಗ್ಗೆ ಯಾರದ್ದೂ ಸುದ್ದಿಯಿಲ್ಲ. ಮತ್ತೆ ಇನ್ನೊಂದು ಪ್ರಕರಣ ಬೆಳಕಿಗೆ ಬಂದಾಗ ಪುನಃ ಎಚ್ಚೆತ್ತುಕೊಂಡು ಮತ್ತೊಂದಿಷ್ಟು ಪ್ರತಿಭಟಿಸುತ್ತಾರೆ. ತೆರೆಮರೆಯಲ್ಲಿ ಇಂಥ ಅದೆಷ್ಟೋ ಘಟನೆಗಳು ನಡೆಯುತ್ತಲೇ ಇವೆ. ದುರಾದೃಷ್ಟವೆಂದರೆ ಗೋಮಾತೆ ಕೇವಲ ಒಂದು ಗುಂಪಿನವರಿಗೆ ಮಾತ್ರ ಪವಿತ್ರಳು, ಪೂಜನೀಯಳು ಎಂಬ ಭಾವನೆ ಎಲ್ಲೆಡೆ ಇದೆ. ಹಾಗಾದರೆ ಉಳಿದವರಿಗೆ ಆಕೆ ಏನೂ ನೀಡಿಲ್ಲವೆ? ಅವಳು ತಾರತಮ್ಯ ಮಾಡುವುದಿಲ್ಲ. ಮನುಷ್ಯರು ಮಾತ್ರ ಇದನ್ನು ಅರ್ಥ ಮಾಡಿಕೊಳ್ಳದೆ ಅವಳನ್ನು ನಿತ್ಯ ಶೋಷಿಸುತ್ತಿದ್ದಾರೆ. ಎಂಥ ಸ್ವಾರ್ಥಿಗಳು! ಆಕೆಯಿಂದ ಸಿಗುವಷ್ಟು ಪ್ರಯೋಜನ ಪಡೆದುಕೊಂಡು ಕೊನೆಗೆ ಅವಳನ್ನೇ ತಿಂದು ತೇಗುತ್ತಾರೆ. ಪ್ರಾಯವಾದ ಮೇಲೆ ಅವಳಿಂದ ಉಪಯೋಗವಿಲ್ಲವೆಂದು! ಹಾಗಿದ್ದರೆ, ಪ್ರಾಯವಾದ ತಾಯಿಯನ್ನೂ ಈ ರೀತಿ ಮಾಡುತ್ತಾರಾ?! ಗೋಮಾತೆಯೂ ಅವಳಂತೆಯೇ ತಾನೆ? ಹೆತ್ತತಾಯಿ ನೀಡುವಷ್ಟೇ ಆರೈಕೆಯನ್ನು ಗೋಮಾತೆಯೂ ನೀಡುತ್ತಾಳೆ. ಪ್ರತಿಫಲವೇನನ್ನೂ ಬಯಸುವುದಿಲ್ಲ. ಹಾಗೆಂದು ಅವಳನ್ನು ನಿರ್ದಾಕ್ಷಿಣ್ಯವಾಗಿ ಕೊಲ್ಲುವುದು ಯಾವ ನ್ಯಾಯ?

ನಮ್ಮಲ್ಲಿನ ಕಾನೂನು ವ್ಯವಸ್ಥೆಯ ಸ್ಥಿತಿನೋಡಿ – ಪಂಜಾಬ್ ಪ್ರೊಹಿಬಿಶನ್ ಆಫ್ ಕೌ ಸ್ಲಾಟರ್ ಆಕ್ಟ್‌ನ ಅಡಿಯಲ್ಲಿ ಬಂಧಿಯಾದ ಗೋಹತ್ಯೆ ಮಾಡಿದ ಅಪರಾಧಿಯಾದ ಖುರ್ಷೀದ್ ಎಂಬ ವ್ಯಕ್ತಿಗೆ, ಸುಮಾರು ಏಳು ವರ್ಷಗಳ ಬಳಿಕ ಒಂದು ವರ್ಷದ ಸಾಮಾನ್ಯ ಸಜೆ ಹಾಗೂ ೫,೦೦೦ ರೂ. ದಂಡ ವಿಧಿಸಲಾಯಿತು. ಇಷ್ಟೆ! ಒಂದು ವೇಳೆ ಅವನು ಒಬ್ಬ ವ್ಯಕ್ತಿಯನ್ನು ಕೊಂದಿದ್ದರೆ, ಮರಣದಂಡನೆಯೋ ಅಥವಾ ಜೀವಾವಧಿಯೋ ನೀಡುತ್ತಿದ್ದರಲ್ಲವೇ? ಮನುಷ್ಯನಿಗಿಂತ ಅದೆಷ್ಟೋ ಶ್ರೇಷ್ಠವಾದ ಪವಿತ್ರ ಗೋಮಾತೆಯನ್ನು ಕೊಂದಿದ್ದಕ್ಕೆ ಕೇವಲ ಒಂದು ವರ್ಷದ ಸಾಮಾನ್ಯ ಸಜೆ! ಇದು ನಡೆದದ್ದು ೨೦೦೫ರಲ್ಲಿ.

ಆದರೆ ೨೦೦೫ರಲ್ಲಿ ಇನ್ನೊಂದು ಮಹತ್ವದ ಬೆಳವಣಿಗೆಯಾಯಿತು. ಗೋಹತ್ಯೆಯನ್ನು ಸಂಪೂರ್ಣ ನಿಷೇಧಿಸುವ ಬಗೆಗಿನ ಗುಜರಾತ್ ಸರಕಾರದ ಕಾನೂನನ್ನು ಸುಪ್ರೀಂಕೋರ್ಟ್ ಎತ್ತಿಹಿಡಿಯಿತು. ಅಲ್ಲಿ ಗುಜರಾತಿನಲ್ಲೂ ಕೂಡ, ಈ ನಿಷೇಧ ಕಾಯಿದೆ ಹನ್ನೊಂದು ವರ್ಷಗಳ ಹಿಂದೆಯೇ ಜಾರಿಗೆ ಬಂದಿತ್ತಾದರೂ, ೧೯೯೮ರಲ್ಲಿ ಅಲ್ಲಿನ ಹೈಕೋರ್ಟ್ ಇದು ಅಸಂವಿಧಾನಾತ್ಮಕ ಹಾಗೂ ಜನರ ಮೂಲಭೂತ ಹಕ್ಕುಗಳಿಗೆ ಅಡ್ಡಿಯಾಗುತ್ತದೆ ಎಂದು ಹೇಳಿತ್ತು! ಆದರೆ ೨೦೦೩ರಲ್ಲಿ ಗುಜರಾತ್ ಸರಕಾರ ಈ ಕಾನೂನನ್ನು ಮತ್ತೆ ಜಾರಿಗೆ ತಂತು. ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯಾಧೀಶ ಆರ್. ಸಿ. ಲಹೋತಿಯವರನ್ನೊಳಗೊಂಡ ೭ ಜನ ನ್ಯಾಯಾಧೀಶರುಗಳ ಒಕ್ಕೂಟವು ಗುಜರಾತ್ ಸರಕಾರದ ಈ ಕಾನೂನು ಜನತೆಯ ಒಳಿತಿಗಾಗಿದೆ ಹಾಗೂ ಸುತ್ತಲಿನ ಜೀವಿಗಳಿಗೆ ಒಂದು ಗೌರವ ತೋರಿಸುವಂತಿದೆ ಎಂದು ಹೇಳಿದೆ. ಈಗ ಭಾರತದ ಅನೇಕ ರಾಜ್ಯಗಳಲ್ಲಿ ಗೋಹತ್ಯಾನಿಷೇಧ ಕಾನೂನು ಜಾರಿಯಲ್ಲಿದೆ.

ಅಂದೊಂದು ಸಲ ಭಾರತ ಸರಕಾರವು ದೇಶಾದ್ಯಂತ ಗೋಮಾಂಸವನ್ನು ಮಾರುವುದನ್ನು ನಿಷೇಧಿಸಲು ಹೊರಟಿತ್ತು. ಆದರೆ, ಸರಕಾರದಲ್ಲಿನ ಕೆಲವು ಮಂತ್ರಿಗಳು ತಮ್ಮಲ್ಲಿ ಈ ಬಗ್ಗೆ ಚರ್ಚಿಸಿಲ್ಲ ಎಂಬ ಕ್ಷುಲ್ಲಕ ಕಾರಣಕ್ಕೆ ಚಕಾರವೆತ್ತಿದರು. ಸದ್ಯ, ಗೋಮಾಂಸದ ಮಾರಾಟವನ್ನು ಬಹುತೇಕ ರಾಜ್ಯಗಳಲ್ಲಿ ನಿಷೇಧಿಸಲಾಗಿದೆ.

ವಿಪರ್ಯಾಸದ ಸಂಗತಿ ಎಂದರೆ, ಭಾರತದಲ್ಲಿ ಹುಲಿಯನ್ನು ಕೊಲ್ಲುವುದನ್ನು ನಿಷೇಧಿಸಲಾಗಿದೆ. ಅಷ್ಟೇ ಏಕೆ, ಬೀದಿನಾಯಿಗಳನ್ನೂ ಕೊಲ್ಲಬಾರದು, ಅವು ಎಷ್ಟೇ ಅಮಾಯಕ ಜೀವಗಳನ್ನು ಬಲಿತೆಗೆದುಕೊಂಡರೂ. ಆದರೆ ಗೋವನ್ನು ಕೊಲ್ಲಬಾರದೆಂಬ ಕಾನೂನು ಜಾರಿಯಲ್ಲಿಲ್ಲ. ಇರುವುದು, ಚೆನ್ನಾಗಿ ಹಾಲು ಕೊಡುತ್ತಾ ಮನುಷ್ಯನಿಗೆ ಉಪಯೋಗಕ್ಕಾಗುತ್ತಿರುವ ಗೋವನ್ನು ಕೊಲ್ಲಬಾರದು ಎಂಬ ಕಾನೂನು. ಆ ಒಂದು ಪ್ರಾಯವನ್ನು ದಾಟಿದ ಬಳಿಕದ ಗೋವನ್ನು ಕೊಲ್ಲಲು ಯಾವುದೇ ನಿಷೇಧಗಳಿಲ್ಲ. ಯಾಕೆ ಹೀಗೆ? ಭಾರತದಲ್ಲಿ ಹುಲಿಗಳ ಸಂಖ್ಯೆ ಕಡಿಮೆಯಾಗಿದೆಯೆಂದು ಅವುಗಳನ್ನು ಕೊಲ್ಲಬಾರದೆಂಬ ಕಾನೂನು ಬಂತು. ಗೋಮಾತೆಯ ವಿಷಯದಲ್ಲೂ ಹೀಗೇ ಆಗಬೇಕಾ? ಗೋವುಗಳ ಸಂಖ್ಯೆ ಅಪಾಯದ ಮಟ್ಟವನ್ನು ತಲುಪಿದ ಬಳಿಕವೇ ಅಂಥ ಕಾನೂನನ್ನು ಜಾರಿಗೆ ತರಬೇಕೆಂದು ಇದೆಯೇ?

ಮುಂದಾಲೋಚನೆಯಿಂದ ಮೊದಲೇ ಆ ಕೆಲಸ ಮಾಡಬಹುದಿತ್ತಲ್ಲ? ಬಿಡಿ, ಈಗಲಾದರೂ ಮಾಡಿಯಾರೇ?

ಹಿಂದೂ ಪುರಾಣವು ಗೋವನ್ನು ಬಹಳ ಗೌರವಿಸುತ್ತದೆ. ಹಿಂದೆ ಭಾರತವನ್ನಾಳುತ್ತಿದ್ದ ಕೆಲವು ಮುಸಲ್ಮಾನ ರಾಜರುಗಳೂ ಕೂಡ ತಮ್ಮ ರಾಜ್ಯದಲ್ಲಿ ಗೋಹತ್ಯೆಯನ್ನು ನಿಷೇಧಿಸಿದ್ದರು. ಕಾರಣ, ಅಲ್ಲಿ ಬಹುಸಂಖ್ಯೆಯಲ್ಲಿರುವ ಹಿಂದೂಗಳಿಗೆ, ಗೋಮಾಂಸ ಭಕ್ಷಣೆಯೆಂಬುದು ಅವರ ಧರ್ಮಕ್ಕೆ ವಿರುದ್ಧವಾದುದೆಂದು. ಅವರ ಭಾವನೆಗಳನ್ನು ನೋಯಿಸಬಾರದೆಂದು. ಆದರೆ, ಇಂದು ಅಂಥ ನೋವಿಗೆ ಬೆಲೆಯೇ ಇಲ್ಲದಾಗಿದೆ. ಜಾತಿದ್ವೇಷ ಎಲ್ಲೆಲ್ಲೂ ಸಾಮನ್ಯ ಎನಿಸಿದೆ. ಇದೇ ಕಾರಣದಿಂದ ಗೋಹತ್ಯೆ ತೆರೆಮರೆಯಲ್ಲಿ ನಡೆಯುತ್ತಲೇ ಇದೆ.

ಭೂಮಿಯಲ್ಲಿ ಯಾರಿಗೂ ಯಾರ ಬದುಕನ್ನೂ ಕಿತ್ತುಕೊಳ್ಳುವ ಅಧಿಕಾರ ಇಲ್ಲ. ಅಂಥ ಮೃಗೀಯ ವರ್ತನೆಯನ್ನು ರೂಢಿಸಿಕೊಂಡ ಇಂಥವರಿಗೆ ಕೊನೆಗಾಲ ಯಾವಾಗ?

ಇಂಥ ಕಸಾಯಿಖಾನೆಗಳಿಗೆ ಅನುಮತಿಯಾದರೂ ಹೇಗೆ ಸಿಕ್ಕುತ್ತದೆ? ಅನುಮತಿಯಿಲ್ಲದೆ ಕದ್ದು ನಡೆಯುವವು ಅವೆಷ್ಟಿವೆಯೋ... ಲಂಚ ಪಡೆಯುವ ಅಧಿಕಾರಿಗಳು, ರಾಜಕಾರಣಿಗಳು ಇರುವವರೆಗೂ ಗೋಮಾತೆಯ ಈ ವೇದನೆ ಇದ್ದೇ ಇರುತ್ತದೆ. ಮನುಷ್ಯರಿಗೆ ಯಾವಾಗಲೂ 'ಕೆಟ್ಟಮೇಲೆ ಬುದ್ಧಿ' ಬರುವುದು ತಾನೆ?

– **ಅನುಶ್ರೀ ಎಲ್.**

## ಮಾಸದ ಗೋವು

## ಸಿಂಧಿ

ಸಿಂಧಿ ಅಥವಾ ಕೆಂಪು ಸಿಂಧಿ ಹುಟ್ಟಿದ್ದು ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ. ಆದರೆ ಇಂದು ಸಿಂಧಿ ತಳಿಯ ಗೋವುಗಳು ಭಾರತ, ಶ್ರೀಲಂಕಾ, ಬಾಂಗ್ಲಾ, ಆಸ್ಟ್ರೇಲಿಯ, ಅಮೆರಿಕ ಸೇರಿದಂತೆ ೩೩ ದೇಶಗಳಲ್ಲಿ ವ್ಯಾಪಿಸಿದೆ ಎಂಬ ವಿಷಯವೇ ನಮಗೆ ಸಿಂಧಿಯ ಮಹತ್ವವನ್ನು ಸಾರಬಲ್ಲುದು. ಇಂದೂ ಕೂಡ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಇವುಗಳದ್ದು ಏಕಸ್ವಾಮ್ಯ. ಅಲ್ಲಿನ ಸಂಪೂರ್ಣ ಆರ್ಥಿಕತೆಯೇ ಸಿಂಧಿಯನ್ನು ಆಧರಿಸಿದೆಯೆಂದರೆ ಉತ್ಪ್ರೇಕ್ಷೆಯಾಗಲಾರದು. ಒಂದು ಲೆಕ್ಕಾಚಾರದ ಪ್ರಕಾರ ಪಾಕಿಸ್ತಾನದ ೨೪ ಪ್ರತಿಶತ ಹಾಲು ಸಿಂಧಿ ತಳಿಗಳಿಂದಲೇ ದೊರಕುತ್ತದೆ.



ಸಿಂಧಿಗಳು ಅತ್ಯುತ್ತಮ ಹಾಲಿನ ತಳಿಗಳು. ಎಲ್ಲ ಹವಾಮಾನಗಳಲ್ಲೂ ದಿನಕ್ಕೆ ೧೨-೧೫ ಲೀ ಹಾಲು ಕೊಡಬಲ್ಲವು ಸಿಂಧಿಗಳು. ಇವುಗಳ ಉಷ್ಣ ನಿರೋಧಕತೆ, ರೋಗ ನಿರೋಧಕ ಸಾಮರ್ಥ್ಯ ಅನನ್ಯ. ಆದರೆ ಇನ್ನೂ ಹೆಚ್ಚಿನದೇನನ್ನೊ ಪಡೆಯಲೆಂಬ ದುರಾಸೆಗೊಳಗಾಗಿ ಇವುಗಳನ್ನು ದೊಡ್ಡ ಮಟ್ಟದಲ್ಲಿ ತಳಿ ಸಂಕರಗೊಳಿಸಲಾಯಿತು. ಯುರೋಪಿನಲ್ಲಂತೂ ೪೦ ಪ್ರತಿಶತಕ್ಕಿಂತಲೂ ಹೆಚ್ಚಿನ ತಳಿಗಳು ಸಿಂಧಿಯ ಮಿಶ್ರತಳಿಗಳು. ಯುರೋಪಿನ ಜನಜನಿತ ಸ್ವಿಸ್ ಬ್ರೌನ್, ಡ್ಯಾನಿಶ್ ರೆಡ್, ಇತ್ಯಾದಿಗಳು ಸಿಂಧಿಯ ಸಂಕರತಳಿಗಳೆ.

ಇಂದು ವಿಶ್ವವಿಖ್ಯಾತವಾಗುತ್ತಿರುವ ಆಸ್ಟ್ರೇಲಿಯನ್ ಸಿಂಧಿ ಪಾಕಿಸ್ತಾನ ಸರಕಾರದಿಂದ ೧೯೫೪ರಲ್ಲಿ ಕೊಡುಗೆಯಾಗಿ ಕೊಡಲ್ಪಟ್ಟಿದ್ದು. ನಂತರ ಸಾಕಷ್ಟು ಸಂಕರವಾಗಿ ಮೂಲತಳಿಯಿಂದ ಸಾಕಷ್ಟು ಭಿನ್ನವಾಗಿದೆಯಾದರೂ ಸಿಂಧಿಗಳ ಉಷ್ಣನಿರೋಧಕತೆ, ಉತ್ತಮ ಹಾಲು ನೀಡುವ ಸಾಮರ್ಥ್ಯಗಳನ್ನು ಹಾಗೆ ಉಳಿಸಿಕೊಳ್ಳಲಾಗಿದೆ.



**ಸಿಂಧಿ, ಪಂಜಾಬ್**

ಸಿಂಧಿಗಳು ಸಾಹಿವಾಲ್‌ಅನ್ನು ಹೆಚ್ಚಾಗಿ ಹೋಲುತ್ತವೆ. ಸಾಹಿವಾಲ್‌ಗಳಿಂದ ಇವು ಭಿನ್ನವಾಗುವುದು ಬಣ್ಣ ಹಾಗು ಕೋಡಿನಿಂದ. ಸಿಂಧಿಗಳದ್ದು ಗಿಡ್ಡ, ಒಳಬಗ್ಗಿದಂತಿರುವ ಕೋಡುಗಳಾದರೆ ಸಾಹಿವಾಲ್‌ಗಳದ್ದು ಉದ್ದಕೋಡು. ಸಿಂಧಿಗಳ ಬಣ್ಣ ಹೆಚ್ಚಾಗಿ ಕೆಂಪು. ಕೆಲವೊಮ್ಮೆ ಕೆಂಪುಮಿಶ್ರಿತ ಬೂದು ಬಣ್ಣದಲ್ಲಿಯೂ ಕಾಣಬಹುದು.

ಇಂದು ಸಿಂಧಿಗಳನ್ನು ಭಾರತದ ಕೆಲವೇ ಗೋಶಾಲೆಗಳಲ್ಲಿ ಕಾಣಬಹುದು. ಭಾರತದಲ್ಲಿ ಇವುಗಳ ಸಂಖ್ಯೆ ನಶಿಸುವುದಕ್ಕೆ ಮುಖ್ಯ ಕಾರಣ ಪ್ರಚಾರವಿಲ್ಲದೆ ಇರುವುದು ಮಾತ್ರ ಎನ್ನುತ್ತಾರೆ ತಜ್ಞರು.

– **ಮಧುಕೇಶ ದೊಡ್ಡೇರಿ**

# ಗೋವು ಮತ್ತು ಕೃಷಿ

**ಶ್ರೀ ಸುಭಾಷ್ ಪಾಳೇಕರರ 'ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ'ಯ ಪರಿಚಯಾತ್ಮಕ ಪುಸ್ತಿಕೆ**

(ಕಳೆದ ಸಂಚಿಕೆಯಿಂದ ಮುಂದುವರೆದುದು) **– ಪರೀಕ್ಷಿತ ತೋಳ್ಪಾಡಿ ಎಸ್.**

ಲಾಭದಾಯಕವಾದರೂ ಆಗಿದೆಯೇ ಎಂದರೆ ಉತ್ತರ ತೀರ ನಿರಾಶಾದಾಯಕ. ಪಂಜಾಬ್ ಹರ್ಯಾಣಾ, ಪಶ್ಚಿಮ ಮಹಾರಾಷ್ಟ್ರಗಳಂಥ ಅತ್ಯುತ್ತಮ ದರ್ಜೆಯ ಕೃಷಿ ಕ್ಷೇತ್ರಗಳೂ ಕೂಡ ಭಾರೀ ಅಣೆಕಟ್ಟುಗಳ ಅತಿ ನೀರಾವರಿಯ ಒತ್ತಡಕ್ಕೆ, ಹೈಬ್ರಿಡ್-ಬಿ.ಟಿ. ಬೀಜಗಳ ಸಂಚಿಗೆ ಬಲಿಯಾಗಿ, ವೈಜ್ಞಾನಿಕ ಕೃಷಿ ಪದ್ಧತಿಯಿಂದಾಗಿ ನಿರ್ಜೀವವಾಗಿರುವುದು, ರೈತ ಸಾಲದ ಸುಳಿಗೆ ಸಿಲುಕುತ್ತಿರುವುದೂ ಸಮಾಜ-ಪರಿಸರ ವಿಜ್ಞಾನಿಗಳೇ ಘೋಷಿಸುತ್ತಿರುವ ದಾರುಣ ತಥ್ಯವಾಗಿದೆ.

ಹಸುರು ಕ್ರಾಂತಿಯು ಆಹಾರದ ಕೊರತೆಯ ಹಿನ್ನೆಲೆಯಲ್ಲಿ ಹುಟ್ಟಿದ್ದು; ವೈಜ್ಞಾನಿಕ ಕೃಷಿ ಪದ್ಧತಿಯ ರಂಗ ಪ್ರವೇಶವಲ್ಲದಿದ್ದರೆ ಇಡಿಯ ಭಾರತವೇ ಹಸಿವೆಯಿಂದ ಸಾಯಬೇಕಿತ್ತು ಎಂದು ಮುಂತಾದ ಸಮರ್ಥನೆಗಳೂ ಬುಡವಿಲ್ಲದ; ನಡುವೂ ಇಲ್ಲದ ವಾದಗಳು ಎನ್ನುವುದನ್ನು ಈಗಾಗಲೇ ಶಯಲೇಂದ್ರನಾಥ ಘೋಷ್, ದಯಾಕೃಷ್ಣ, ಮಾಧವ ಗಾಡ್ಗೀಳ್ ಮುಂತಾದ ವಿದ್ವಾಂಸರು ಸಮರ್ಥವಾಗಿ ತೋರಿಸಿಕೊಟ್ಟಿದ್ದಾರೆ. ವಾಸ್ತವವಾಗಿ ಹಸಿರು ಕ್ರಾಂತಿ ಅತ್ಯಂತ ಅದೂರದೃಷ್ಟಿಯ, ವೈಜ್ಞಾನಿಕ ಕೃಷಿ ಎಂಬ ಹೆಸರಿನ ತೀರ ಅವೈಜ್ಞಾನಿಕ ಕೃಷಿ ಎನ್ನುವುದನ್ನು ಎಳೆಎಳೆಯಾಗಿ ಬಿಡಿಸಿ ವಿವರಿಸಿದ್ದಾರೆ.

ಇರಲಿ, ಹಸಿರುಕ್ರಾಂತಿ ಆ ಕಾಲದ ಅವಶ್ಯಕತೆಯಾಗಿತ್ತು ಎನ್ನುವುದನ್ನು ಒಪ್ಪಿದರೂ, ಈ ಕ್ರಾಂತಿಯಿಂದಾಗಿ ಕೆಲವು ಸಮಯದಿಂದ ಅಗತ್ಯಕ್ಕಿಂತ ಹೆಚ್ಚು ಆಹಾರೋತ್ಪದನೆ ಆಗುತ್ತಿದೆ ಎನ್ನುವುದನ್ನು ನಂಬಿದರೂ ಇದಕ್ಕಾಗಿ ನಾವು ತೆತ್ತ ಬೆಲೆಯನ್ನು ಅವಲೋಕಿಸಿದರೆ ಕಾಣುವುದೇನನ್ನು?

ಜಗತ್ತಿನ ಅತಿದೊಡ್ಡ ಕೃಷಿತಜ್ಞರಲ್ಲಿ ಒಬ್ಬರಾಗಿದ್ದ ಸರ್ ಅಲ್ಬರ್ಟ್ ಹೋವಾರ್ಡ್ ಯಾವ ಭಾರತೀಯ ಕೃಷಿ ಪದ್ಧತಿಯನ್ನು 'ಇಡೀ ಜಗತ್ತಿನ ಕೃಷಿಕರು ಇಲ್ಲಿಂದ ಕೃಷಿಯನ್ನು ಕಲಿಯಬೇಕಾಗಿದೆ' ಎಂದು ವರ್ಣಿಸಿದರೋ ಅಂಥ ಅಪೂರ್ವ ಪಾರಂಪರಿಕ ಕೃಷಿಜ್ಞಾನವನ್ನು ಸಂಪೂರ್ಣವಾಗಿ ಮರೆತ; ವಿಸ್ಮೃತಿಗೊಳಗಾದ ಅದೇ ಭಾರತದ ಕೃಷಿಕನೊಬ್ಬನ ಚಿತ್ರವನ್ನು!

ಯಾರನ್ನು ಶೋಷಿಸಬೇಕಾಗಿದೆಯೋ ಅವರು ತಮ್ಮತನವನು; ತಮ್ಮ ಅಸ್ತಿತ್ವದ ಮೂಲವನ್ನು ಸಂಪೂರ್ಣವಾಗಿ ಮರೆಯುವಂತೆ; ವಿಸ್ಮೃತಿಗೊಳ್ಳುವಂತೆ ಮಾಡುವುದೇ ಎಲ್ಲಕಾಲದ ಶೋಷಕ ಶಕ್ತಿಗಳ; ವ್ಯವಸ್ಥೆಗಳ ಮೊದಲ ಕೆಲಸವಾಗಿದೆ.

ಆದರೆ ಮನುಷ್ಯನ ವ್ಯಕ್ತಿತ್ವದ ಅಚ್ಚರಿಯೆಂದರೆ ತಪ್ಪು ಹೆಜ್ಜೆಗಳೇ ಶೋಷಣೆಗಳೇ, ವಿಸ್ಮೃತಿಗಳೇ ಅವೆಲ್ಲವನ್ನೂ ಮೀರುವ ನವೀನ ಸಾಹಸವೊಂದಕ್ಕೆ ಮೂಲದ್ರವ್ಯಗಳಾಗುವುದು. ಜಗತ್ತಿನ ದೇಶಗಳು ವೈಜ್ಞಾನಿಕ ಕೃಷಿ ಪದ್ಧತಿಯ ಮೋಹಕ್ಕೆ ಬಿದ್ದು ತಮ್ಮ ಪಾರಂಪರಿಕ ವ್ಯವಸಾಯ ಪದ್ಧತಿಯನ್ನು ಮರೆತು ಸಮಸ್ಯೆಗಳ ಸರಮಾಲೆಗೆ ಸಿಲುಕಿದಾಗ ಎಚ್ಚರಗೊಂಡು, ಉಳಿದವರನ್ನೂ ಎಚ್ಚರಿಸಲು ಮೂಡಿ ಬಂದ ಜಪಾನಿನ ಕೃಷಿಋಷಿ ಮಸನೊಬು ಫುಕುವೋಕಾ.

ತನ್ನದೇ ಪ್ರಚಂಡ ದರ್ಶನದಿಂದ ಪಾರಂಪರಿತ ವ್ಯವಸ್ಥೆಗೆ ಹೊಸ ಸತ್ವವನ್ನು ನೀಡಿ, ಸಹಜ ಕೃಷಿ ಎನ್ನುವ ಹೊಚ್ಚ ಹೊಸ ಪದ್ಧತಿಯೊಂದನ್ನು ಆವಿಷ್ಕರಿಸಿದ. ಪ್ರಕೃತಿಯನ್ನು ತೀವ್ರವಾಗಿ ವಿಶ್ಲೇಷಿಸಿ, ವಿಭಜಿಸಿ ವಿಜ್ಞಾನ ತನ್ನ ನೂತನ ಶೋಧನೆಗಳನ್ನು ಮಾಡುತ್ತಿರುವಾಗಲೇ ಫುಕುವೋಕಾ ಪ್ರಕೃತಿ ಅರ್ಥವಿಸಲು ನಿಲುಕದ ಅನೂಹ್ಯ; ಅಗಾಧ ತತ್ತ್ವ ಎಂದು ಹೇಳಿ ಕೃಷಿಯು ನಿಸರ್ಗದೊಂದಿಗಿನ ಮಧುರ ಮುಗ್ಧ ಪ್ರೇಮದ ಫಲ ಎಂದು ವಿವರಿಸಿದ.

ಇಂಥ ಫುಕುವೋಕಾನ ಪ್ರಭಾವದಿಂದ, ಡಾ. ಆಲ್ಬರ್ಟ್ ಹೋವಾರ್ಡ್ ಮುಂತಾದ ಮಹನೀಯರ ಚಿಂತನೆ; ಪ್ರಯೋಗಗಳಿಂದ ಭಾರತದಲ್ಲಿ ರಾಸಾಯನಿಕ ಕೃಷಿಗೆ ಪ್ರತಿಯಾಗಿ ಪರಂಪರಾಗತ ಜ್ಞಾನದ ಆಧಾರದಲ್ಲಿ ಹಲಕೆಲವು ಬದಲಾವಣೆಗಳೊಂದಿಗೆ ಸಾವಯವ ಕೃಷಿ ಹುಟ್ಟಿಕೊಂಡಿತು. ಎಲ್ಲ ವಿಚಾರವಂತರು, ಪ್ರಕೃತಿಯನ್ನು ಅದರ ಶುದ್ಧ ರೂಪದಲ್ಲಿ ಉಳಿಸುವ ಕಳಕಳಿಯ ಎಲ್ಲ ಪ್ರಜ್ಞಾವಂತ ಕೃಷಿಕರು ಈ ಪದ್ಧತಿಯನ್ನು ಅನುಸರಿಸಲು ಪ್ರಾರಂಭಿಸಿದರು. ರಾಸಾಯನಿಕ ಗೊಬ್ಬರಗಳಿಗೆ ಪ್ರತಿಯಾಗಿ ಸಾವಯವ ಗೊಬ್ಬರ, ರಾಸಾಯನಿಕ ಕೀಟನಾಶಕಗಳಿಗೆ ಬದಲಾಗಿ ಸಾವಯವ ಕೀಟನಾಶಕ ಅಥವಾ ಕೀಟಗಳನ್ನು ಕೊಲ್ಲದೆ ವೈವಿಧ್ಯಮಯ ಬೆಳೆಗಳಿಂದ ಸಹಜವಾಗಿ ನಿಯಂತ್ರಣ ಮತ್ತು ಸಂಕರ; ಹೈಬ್ರಿಡ್, ಬಿ.ಟಿ.ಬೀಜಗಳಿಗೆ ಬದಲಾಗಿ ಸ್ಥಳೀಯ ತಳಿಗಳು ಈ ಪದ್ಧತಿಯ ಮೂಲ ತತ್ವಗಳಾದವು.

ಇದರಲ್ಲಿ ಕಾಲಕ್ರಮೇಣ ನಡೆಪ್ ಪದ್ಧತಿ, ಎ. ಬೆಸ್ಟ್ ಪದ್ಧತಿ, ಎಸ್. ಆರ್. ಧಾಬೋಲ್ಕರ್ ಪದ್ಧತಿ, ಡಾ. ರುಡಾಲ್ಫ್ ಸ್ಟೀನರ್ ಪ್ರಣೀತ ಜೀವಚೈತನ್ಯ ಕೃಷಿ. ಬರ್ನಾರ್ಡ್ ಡಿ ಕ್ಲರ್ಕ್ ವಿಧಾನ ಮುಂತಾದ ಹೊಸ ವಿಚಾರಧಾರೆಗಳೂ ಉಂಟಾದವು. ಇವೆಲ್ಲದರ ಮುಂದುವರಿಕೆಯೋ ಎಂಬಂತೆ ಇದೀಗ ಬಂದಿದೆ ಸುಭಾಷ್ ಪಾಳೇಕರರ ಶೂನ್ಯ ಬಂಡವಾಳದ ಲಾಭದಾಯಕ ನೈಸರ್ಗಿಕ ಕೃಷಿ.

ಮಹಾರಾಷ್ಟ್ರದ ಅಮರಾವತಿಯ ಶ್ರೀ ಸುಭಾಷ್ ಪಾಳೇಕರ್, ಪರಂಪರಾಗತ ಕೃಷಿ ಜ್ಞಾನದೊಂದಿಗೆ ಶುದ್ಧ ವಿಜ್ಞಾನದ ಸಂಶೋಧನೆಗಳನ್ನು ಮೇಳೈಸಿ, ಭಾರತದ ವಿಭಿನ್ನ ಪ್ರದೇಶಗಳ ಆದಿವಾಸಿಗಳ, ಸಾಮಾನ್ಯಾತಿ ಸಾಮಾನ್ಯ ರೈತರ ಕೃಷಿ ಪದ್ಧತಿಗಳನ್ನು ಅವಲೋಕಿಸಿ, ದಟ್ಟ ಅರಣ್ಯಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸಿ, ಫುಕುವೋಕಾರೊಂದಿಗೆ ಚರ್ಚಿಸಿ, ನಿರಂತರ ಪ್ರಯೋಗಗಳನ್ನು ಮಾಡಿ ನವೀನ ವಿಧಾನವೊಂದನ್ನು ರೂಪಿಸಿದ್ದಾರೆ. ಅವರು ಹೇಳುವಂತೆ ಇದು ಪ್ರಾಚೀನ ಭಾರತದಲ್ಲಿ ಎಲ್ಲೆಡೆಯೂ ಅನುಸರಿಸುತ್ತಿದ್ದ ಕೃಷಿ ವಿಧಾನ. ಅಂದರೆ ಇದೊಂದು ವಿಸ್ಮೃತಿಗೆ ಸರಿದಿದ್ದ ನಮ್ಮದೇ ಕೃಷಿ ಸಂಸ್ಕೃತಿಯ ಪುನರುಜ್ಜೀವನ.

ತೀರ ಬಡ ಕೃಷಿಕನಿಗೂ ಸಲ್ಲುವ, ಆತನನ್ನು ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತಗೊಳಿಸಿ, ಆರ್ಥಿಕವಾಗಿ ಸಬಲವಾಗಿಸಿ ತನ್ಮೂಲಕ ಗ್ರಾಮ ಸ್ವರಾಜ್ಯ–ಸ್ವಾವಲಂಬೀ ಭಾರತದ ನಿರ್ಮಾಣ ಇವು ಪಾಳೇಕರರ ಅಂತರಂಗದ ಆಶಯವಾಗಿದೆ.

ಬನ್ನಿ, ಕೃಷಿ ಲೋಕಕ್ಕೆ ಒಂದು ಹೊಸ ಚೈತನ್ಯವನ್ನು ನೀಡಬಲ್ಲ ನೈಸರ್ಗಿಕ ಕೃಷಿಯ ಪರಿಚಯವನ್ನು ಮಾಡಿಕೊಳ್ಳೋಣ.

ಭೂಮಿಯನ್ನು ಪ್ರಾಚೀನರು 'ಅನ್ನಪೂರ್ಣೆ' ಎಂದು ಕರೆದರು. ಅದೊಂದು ಭಾವುಕ ಘೋಷಣೆಯಲ್ಲ ಬದಲಾಗಿ ವಾಸ್ತವಿಕ ಸತ್ಯ ಎನ್ನುತ್ತಾರೆ ಪಾಳೇಕರ್. ಭೂಮಿ ಸಸ್ಯಗಳಿಗೆ ಬೇಕಾದ ಎಲ್ಲ ಬಗೆಯ ಪೋಷಕಾಂಶಗಳ ಅಕ್ಷಯ ನಿಧಿಯಾಗಿದೆ. ಎಂದೆಂದೂ ಬರಿದಾಗದ ಬುವಿಯೊಡಲು ನಿರಂತರವಾಗಿ ತನ್ನನ್ನು ತಾನು ಪುನರ್ನವೀಕರಿಸಿಕೊಳ್ಳುತ್ತ ಎಲ್ಲ ಬಗೆಯ ಸಸ್ಯರಾಶಿಯನ್ನು ಅನಂತ ಕಾಲದವರೆಗೆ ಪೋಷಿಸಲು ಶಕ್ತವಾಗಿದೆ. ಆದ್ದರಿಂದಲೇ ಅದಕ್ಕೆ 'ಅನ್ನಪೂರ್ಣೆ' ಎನ್ನುವ ಹೆಸರು ಎಂದೆನ್ನುತ್ತಾರೆ ಅವರು. ಪಶ್ಚಮ ಘಟ್ಟದ ಸಾನು ಪ್ರದೇಶವನ್ನೇ ನೋಡಿ. ಅದೆಷ್ಟು ಸಾವಿರ ವರುಷಗಳಿಂದ ನಿರಂತರವಾಗಿ ಹಸಿರುಕ್ಕಿಸುತ್ತ ಗಗನ ಚುಂಬಿಯಾದ ಆ ಮಹಾರಣ್ಯವನ್ನು ಆ ಭೂಮಿ ಹೊತ್ತಿಲ್ಲ? ಇದೊಂದೇ ಭೂಮಿಯ ಪೋಷಿಸಬಲ್ಲ ಕ್ಷಮತೆಯನ್ನು ನಿರ್ವಿವಾದವಾಗಿ ಸಾಧಿಸುತ್ತಿದೆಯಲ್ಲವೇ?

ಪಾಳೇಕರ್, ನಮ್ಮ ಕೃಷಿ ಕೂಡ ಆದಷ್ಟು ಕಡಿಮೆ ಮಾನವ ಹಸ್ತಕ್ಷೇಪದಿಂದ ಕೂಡಿ, ಬಹುಪಾಲು ಜವಾಬ್ದಾರಿಯನ್ನು ಹೊಣೆಯನ್ನು ಪ್ರಕೃತಿಗೇ ನೀಡುವಂತೆ ರೂಪಿತವಾಗಿರಬೇಕು ಎನ್ನುತ್ತಾರೆ. ನೈಸರ್ಗಿಕ ಕೃಷಿಯೆಂದರೆ ಅದೊಂದು ಕಾಡಿನ ಪ್ರತಿಫಲನ.

ಭೂಮಿ ಹೀಗೆ ಸಮೃದ್ಧ, ಎಂದೂ ಬರಿದಾಗದ ಪೋಷಕಾಂಶಗಳಿಂದ ಭರಿತವಾಗಿದ್ದರೂ, ಸಸ್ಯಗಳಿಗೆ ಆ ಪೋಷಕಾಂಶಗಳನ್ನು ಒದಗಿಸುವ ಮಾಧ್ಯಮಗಳು –ಸೂಕ್ಷ್ಮಾಣು ಜೀವಿಗಳು. ಆದ್ದರಿಂದ ಪಾಳೇಕರ್ ಹೇಳುವಂತೆ ಕೃಷಿಯೆಂದರೆ 'ಭೂಮಿಯಲ್ಲಿ ಸೂಕ್ಷ್ಮಾಣು ಜೀವಿಗಳ ಸೃಷ್ಟಿ' ಮಾತ್ರ. ಇದು ಹೇಗೆ ಸಾಧ್ಯ? ಅವರೆನ್ನುವಂತೆ ಇದಕ್ಕಿರುವ ಏಕೈಕ ದಾರಿ ನಮ್ಮ ಸ್ವದೇಶಿ ಗೋವಂಶದ ಬಳಕೆ. ಒಂದು ಗ್ರಾಂ. ದೇಶೀ ದನದ ಸೆಗಣಿಯಲ್ಲಿ ೩೦೦ ಕೋಟಿಗೂ ಹೆಚ್ಚು ಜೀವಾಣುಗಳಿವೆ (ಬ್ಯಾಕ್ಟೀರಿಯಾಗಳು) ಮತ್ತು ಈ ಎಲ್ಲ ಜೀವಾಣುಗಳು ಭೂಮಿಗೆ ಬಿದ್ದೊಡನೆಯೇ ಪ್ರತಿ ಇಪ್ಪತ್ತು ನಿಮಿಷಗಳಿಗೊಮ್ಮೆ ದ್ವಿಗುಣಗೊಳ್ಳುತ್ತ ಅಸಂಖ್ಯವಾಗಿ ವಿಸ್ತರಿಸಿ ಭೂಮಿಯಲ್ಲಿರುವ ಬಗೆಬಗೆಯ ಪೋಷಕಾಂಶಗಳನ್ನು ಸಸ್ಯಗಳಿಗೆ ತಲುಪಿಸುವಂತೆ ರೂಪಿತವಾಗಿವೆ ಎಂಬ ವೈಜ್ಞಾನಿಕ ಸತ್ಯ ಈ ಪದ್ಧತಿಯ ಜೀವಾಳವಾಗಿದೆ.

(ಮುಂದುವರೆಯುವುದು)

(ಕೃಪೆ: ಧರ್ಮಭಾರತೀ)

**ಕವನ**

## ನೀವು ಮನುಜರೇ?

ನೀವು ಮನುಜರೇ
ಅಲ್ಲ ದನುಜರೇ?

ನಮ್ಮ ಮನವ ಮನೆಯ ಬೆಳಗಿ
ಅಮ್ಮನಂತೆ ನಮ್ಮ ಪೊರೆವ
ಮೂಕ ಮುಗ್ಧ ಗೋವುಗಳನು
ಕೊಲ್ಲಲೆಳಸುವಂಥ ನೀವು
ಮನುಜರೇ ಅಲ್ಲ ದನುಜರೇ?

ಹಸಿರನುಂಡು ಹಾಲನೀವ
ಕೆಸರಿನಲ್ಲಿ ಗದ್ದೆ ಉಳುವ
ವಸುಮತಿಯೊಳು ಭಾಗ್ಯ ಬೆಳೆವ
ಪಶುಗಳನ್ನೆ ಕೊಲುವ ನೀವು
ಮನುಜರೇ ಅಲ್ಲ ದನುಜರೇ?

ಪುಟ್ಟ ಮಕ್ಕಳಂತೆ ನಲಿವ
ಪುಟ್ಟ ಪುಟ್ಟ ಕರುಗಳನ್ನು
ಅಟ್ಟಿ ಹಿಡಿದು ಕಟ್ಟಿ ಹಾಕಿ
ಕುಟ್ಟಿ ಕುಟ್ಟಿ ಕೊಲುವ ನೀವು
ಮನುಜರೇ ಅಲ್ಲ ದನುಜರೇ?

ನಿಮ್ಮ ಆತ್ಮವನ್ನೆ ಕೇಳಿ
ನಿಮ್ಮ ಹೃದಯವನ್ನೆ ಕೇಳಿ
ಇಂಥ ಕ್ರೂರ ಹಿಂಸೆಯನ್ನು
ದೇವ ಮೆಚ್ಚಬಹುದೆ ಹೇಳಿ
ಮತ್ತೆ ಈಗ ಹೇಳಿ ನೀವು
ಮನುಜರೇ ಅಲ್ಲ ದನುಜರೇ?

**– ಡಾ. ರಮಾನಂದ ಬನಾರಿ**



Photo credit - www.goraksha.org.in